**ಸಾಕ್ಷಿಗೆ ದಿನಾಂಕಃ 08.04.2026 ರಂದು ಪ್ರಮಾಣ ಮಾಡಿಸಲಾಯಿತು.**

**ಮುಂದುವರೆದ ಪಾಟೀ ಸವಾಲು : ಶ್ರೀ. ಎಂ.ಡಿ. ವಕೀಲರಿಂದಃ**

ದಾವಾ ಸ್ವತ್ತಿನ ಜಂಜರ್ ಸಂಖ್ಯೆ ಮತ್ತು ಖಾತೆ ಸಂಖ್ಯೆ ನನಗೆ ನೆನಪಿಲ್ಲ. ದಾವಾ ಸ್ವತ್ತು ಪ್ರತಿವಾದಿಗಳ ಸ್ವತ್ತಿನ ದಕ್ಷಿಣಕ್ಕೆ ಬರುತ್ತದೆ ಎಂದರೆ ಸರಿ. ನಿ.ಪಿ.1 ಮತ್ತು 2 ನ್ನು ಪ್ರಶ್ನಿಸಿ ಪ್ರತಿವಾದಿಗಳು ಮೇಲ್ಮನವಿ ಸಲ್ಲಿಸಿದ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ಅಪೀಲಿನಲ್ಲಿ ತಾಲ್ಲೂಕು ಪಂಚಾಯಿತಿಯವರು ನಿ.ಪಿ.1 ಮತ್ತು 2 ನ್ನು stay ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ವಿಚಾರ ನನಗೆ ಗೊತ್ತಿದ್ದರೂ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಿ.ಪಿ.9 ರಿಂದ 11 ದಾಖಲೆಗಳಲ್ಲಿ ಕಾಣಿಸುವ ನೀಲಿ ಗೋಡೆಯ ಮನೆ ಪ್ರತಿವಾದಿಗಳಿಗೆ ಸೇರಿರುತ್ತದೆ ಎಂದರೆ ಸರಿ. ಸದರಿ ದಾಖಲೆಗಳಲ್ಲಿ ಕಾಣಿಸುವ ಖಾಲಿ ಜಾಗವೇ ದಾವಾ ಸ್ವತ್ತು ಆಗಿರುತ್ತದೆ ಎಂದರೆ ಸರಿ. ಸದರಿ ದಾಖಲೆಗಳಲ್ಲಿ ಕಾಣಿಸುವ ಬಾಗಿಲಿನ ಮೂಲಕ 1 ನೇ ಪ್ರತಿವಾದಿಯ ಮಗ ಓಡಾಡುತ್ತಿರುತ್ತಾರೆ ಎಂದರೆ ಸರಿ. 2 ಮತ್ತು 3 ನೇ ಪ್ರತಿವಾದಿಗಳು ಸದರಿ ದಾಖಲೆಗಳಲ್ಲಿ ಕಾಣಿಸುವ ತಮ್ಮ ಮನೆಗೆ ಸುಣ್ಣ ಬಣ್ಣವನ್ನು ದಕ್ಷಿಣದ ಮೂಲಕ ಬಂದು ಹೊಡೆಯುತ್ತಾರೆ ಎಂದರೆ ಸರಿ.

ನಿ.ಪಿ.20 ಮತ್ತು 23 ರಲ್ಲಿ ಕಾಣಿಸುವ ಮಣ್ಣಿನ ಗೋಡೆಯ ಮನೆಯು 1 ನೇ ಪ್ರತಿವಾದಿಗೆ ಸೇರಿರುತ್ತದೆ. ನಿ.ಪಿ.23 ರಲ್ಲಿ ಕಾಣಿಸುವ ಮನೆಯು ಪ್ರತಿವಾದಿಗಳಿಗೆ ಸೇರಿದ್ದು, ಅದರ ಮುಂಭಾಗದಲ್ಲಿ ಖಾಲಿ ಜಾಗ ಇರುತ್ತದೆ. ಪ್ರತಿವಾದಿಗಳು ವಾಸ ಮಾಡುವ ಮನೆಯ ಪಶ್ಚಿಮ ಭಾಗದಲ್ಲಿ 1 ನೇ ಪ್ರತಿವಾದಿಯ ಮಗ ವಾಸ ಮಾಡುತ್ತಾರೆ. ಸದರಿ ಮನೆಯ ಉತ್ತರ ಭಾಗದಲ್ಲಿ 1 ನೇ ಪ್ರತಿವಾದಿಯ ಇನ್ನೊಬ್ಬ ಮಗ ವಾಸ ಮಾಡುತ್ತಾರೆ ಎಂದರೆ ಸರಿ. ಸಾಕ್ಷಿಗೆ ಒಂದು ಫೋಟೋವನ್ನು ತೋರಿಸಲಾಗಿ ಸದರಿ ಫೋಟೋದಲ್ಲಿ ಕಾಣಿಸುವ ನೀಲಿ ಬಣ್ಣದ ಮನೆಯು ಪ್ರತಿವಾದಿಗಳಿಗೆ ಸೇರಿದ್ದು, ಅದರ ಪೂರ್ವ ಮತ್ತು ದಕ್ಷಿಣ ದಿಕ್ಕಿನಲ್ಲಿ ರಸ್ತೆ ಬರುತ್ತದೆ ಎಂದು ನೋಡಿ ಒಪ್ಪಿದ್ದು, ಅದನ್ನು ನಿ.ಡಿ.1 ಎಂದು ಗುರುತಿಸಲಾಯಿತು. ಸದರಿ ದಾಖಲೆಯಲ್ಲಿ ದಕ್ಷಿಣದ ದಿಕ್ಕಿನಲ್ಲಿರುವ ರಸ್ತೆಯಲ್ಲಿ ಮೋರಿ ಮಾಡಲು ಪಂಚಾಯಿತಿಯವರು ಅಗೆದಿರುವುದು ಕಾಣಿಸುತ್ತಿದೆ ಎಂದರೆ ಸರಿ.

ಸಾಕ್ಷಿಗೆ ಮತ್ತೊಂದು ಫೋಟೋವನ್ನು ತೋರಿಸಲಾಗಿ ಅದರಲ್ಲಿ ಕಾಣಿಸುವ ಮನೆಯು ಪ್ರತಿವಾದಿಗಳಿಗೆ ಸೇರಿರುತ್ತದೆ ಎಂದು ನೋಡಿ ಒಪ್ಪಿದ್ದು, ಅದನ್ನು ನಿ.ಡಿ.2 ಎಂದು ಗುರುತಿಸಲಾಯಿತು. ಸಾಕ್ಷಿಗೆ ಮತ್ತೊಂದು ಫೋಟೋವನ್ನು ತೋರಿಸಲಾಗಿ ಅದರಲ್ಲಿ

ಕಾಣಿಸುವ ಮನೆಯಲ್ಲಿ 1 ನೇ ಪ್ರತಿವಾದಿಯ ಮಗ ದಾವಾ ಸ್ವತ್ತಿನ ಕಡೆ ಬಾಗಿಲನ್ನು ತೆರೆದು ವಾಸ ಮಾಡುತ್ತಿದ್ದಾರೆ ಎಂದು ನೋಡಿ ಒಪ್ಪಿದ್ದು, ಅದನ್ನು ನಿ.ಡಿ.3 ಎಂದು ಗುರುತಿಸಲಾಯಿತು. ನಿ.ಡಿ.1 ರಿಂದ 3 ರಲ್ಲಿ ಕಾಣಿಸುವ ಮನೆಯನ್ನು ಶಂಭುಲಿಂಗನಾಯಕನ ತಂದೆ ಮನಿಯನ ಲಿಂಗಯ್ಯ ಖರೀದಿ ಮಾಡಿರುತ್ತಾರೆ ಎಂದರೆ ಸರಿ. ದಿ.28.06.1941 ರಂದು ಸದರಿ ಸ್ವತ್ತನ್ನು ಸದರಿಯವರು ಲಿಂಗಪ್ಪನವರಿಂದ ಖರೀದಿ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ವಿಚಾರವನ್ನು ಪ್ರತಿವಾದಿಗಳು ತಮ್ಮ ಪ್ರತಿವಾದ ಪತ್ರದಲ್ಲಿ ನಮೂದು ಮಾಡಿದ್ದು ಅದನ್ನು ಓದಿಸಿ ತಿಳಿದುಕೊಂಡಿರುವುದಿಲ್ಲ.

ಪ್ರತಿವಾದಿಗಳ ವಿಭಾಗ ಪತ್ರದ ದಿ.25.11.1971 ರ ಬಗ್ಗೆ ನಾನು ಓದಿಸಿ ತಿಳಿದುಕೊಂಡಿರುವುದಿಲ್ಲ. ದಿ.28.06.1941 ರ ಕ್ರಯಪತ್ರವನ್ನು ನಾನು ಓದಿಸಿ ತಿಳಿದುಕೊಂಡಿರುವುದಿಲ್ಲ. ಸದರಿ ಪತ್ರದಲ್ಲಿ ಮನೆ ಮತ್ತು ದಾವಾ ಸ್ವತ್ತನ್ನು ಸೇರಿಸಿ ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ದಿ.25.11.1971 ರ ವಿಭಾಗ ಪತ್ರದಲ್ಲಿ ಮನೆ ಮತ್ತು ದಾವಾ ಸ್ವತ್ತನ್ನು ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಅಂದಿನಿಂದ ಪ್ರತಿವಾದಿಗಳು ಮನೆ ಮತ್ತು ದಾವಾ ಸ್ವತ್ತನ್ನು ಉಪಯೋಗಿಸಿಕೊಂಡು ಬಂದಿರುತ್ತಾರೆ ಎಂದರೆ ಸರಿಯಲ್ಲ.

ನಮ್ಮ ಅತ್ತೆ ಮಹದೇವಮ್ಮ ಉರುಫ್ ಚಿಕ್ಕತಾಯಮ್ಮ ರವರ ಹೆಸರಿನಲ್ಲಿ ದಾವಾ ಸ್ವತ್ತಿನ ಖಾತೆ ಇರಲಿಲ್ಲ. ಸದರಿಯವರು ನಮ್ಮಗಳ ಹೆಸರಿಗೆ ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಪತ್ರ ಬರೆದಿರುವುದಿಲ್ಲ. ದಾವಾ ಸ್ವತ್ತಿನ ಮೇಲೆ ಹಕ್ಕು ಮತ್ತು ಸ್ವಾಧೀನ ನನಗೆ, ನನ್ನ ಹೆಂಡತಿಗೆ ಹಾಗೂ ಅವರ ತಾಯಿಗೆ ಇರಲಿಲ್ಲ ಎಂದರೆ ಸರಿಯಲ್ಲ. ನಿ.ಪಿ.1 ಮತ್ತು 2 ನ್ನು ಸೃಷ್ಟಿ ಮಾಡಿಕೊಂಡು ಪ್ರತಿವಾದಿಗಳಿಗೆ ಸೇರಿದ ಸ್ವತ್ತನ್ನು ಕಬಳಿಸಲು ಪ್ರಯತ್ನಿಸಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತನ್ನು ಹೊಡೆಯುವ ಸಲುವಾಗಿ ಈ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ಈ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿಗೂ ವಾದಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

**(ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಒ.**

**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**
**ಮತ್ತು ಪ್ರ.ದ.ನ್ಯಾದಂ. ತಿ.ನರಸೀಪುರ.**